


### ಅನ್ಯಗ್ರಹದ ಪ್ರಶ್ನೆಗಳಿಗೆ ಉತ್ತರ

ಅನ್ಯಗ್ರಹಗಳಲ್ಲಿ ಜೀವಿಗಳಿವೆಯೇ? ಇದ್ದರೆ ಯಾವ ರೀತಿ ಇರಬಹುದು? ಅವುಗಳಿಂದ ಮಾನವನಿಗೆ ಏನಾದರೂ ತೊಂದರೆ ಇದೆಯೇ ಎಂಬ ಜನಸಾಮಾನ್ಯರ ಪ್ರಶ್ನೆಗಳಿಗೆ ಸುಧಾ ಮುಖಪುಟ ಲೇಖನದಲ್ಲಿ (ಅ.14) ಉತ್ತರವಿದೆ.

-ಕೆ.ಎಸ್.ಚಂದ್ರ, ಕೌಡ್ಲೆ/
ಪಿ.ಗೋಕುಲ್‌ದಾಸ್, ಮಂಗಳೂರು

### ಆಕರ್ಷಕ ದಸರಾ ದರ್ಬಾರ್

ಈ ಬಾರಿಯ ಖಾಸಗಿ ದಸರಾ ದರ್ಬಾರ್ ಕುರಿತಾದ ಮಧುಸೂದನ್ ಮತ್ತು ಹಂಪಾ ನಾಗರಾಜ್ ಚಿತ್ರ ಮತ್ತು ಬನ್ನೂರು ಕೆ.ರಾಜು ಲೇಖನ ಆಕರ್ಷಕವಾಗಿತ್ತು. ಈ ಕಾರಣಗಳಿಂದಲೇ 'ಸುಧಾ' ನಿನ್ನ ಜನಪ್ರಿಯತೆ ಅಪಾರ ಅಲ್ಲವೇ?

-ನೆ.ಲ.ರಾಂ., ಬೆಂಗಳೂರು

### ಮಹಿಳಾ ಕಾಳಜಿಯ ವೈಶಾಲ್ಯ

ವೈಶಾಲಿ ಕಾಸರವಳ್ಳಿಯವರು ತಾವು ನಿರ್ದೇಶಿಸಿದ ಟಿವಿ ಧಾರಾವಾಹಿಗಳಲ್ಲಿ ಮಹಿಳಾ ಕಾಳಜಿಗೆ ಹೇಗೆ ಒತ್ತುಕೊಟ್ಟಿದ್ದರು ಎಂಬ ವಿಷಯವನ್ನು 'ಮುತ್ತಿನ ತೋರಣ ಕಟ್ಟಿದ ವೈಶಾಲಿ' ಗುಡಿಹಳ್ಳಿ ನಾಗರಾಜರ ಲೇಖನ ಸ್ಪಷ್ಟವಾಗಿ ತೋರಿಸಿಕೊಟ್ಟಿದೆ.

-ಸತ್ಯಭಾಮ, ಕೆ.ಪುಷ್ಪಾ, ಎ.ಕೆ. ಪಟ್ಟಾಭಿ, ಬೆಂಗಳೂರು

### ಗಾರುಡಿಗನ ಅನಾವರಣ

'ಸ್ಟಿಲ್ ಬರ್ಗ್ ಎಂಬ ಗಾರುಡಿಗ' ಎಂಬ ಎಚ್.ಎಸ್. ಮಂಜುನಾಥರ ಲೇಖನ ಅದ್ಭುತ ಕನಸುಗಾರನೊಬ್ಬನ ನೈಜ ಪ್ರಯತ್ನಗಳನ್ನು ಅನಾವರಣ ಮಾಡಿದೆ.

-ಎಚ್. ಆನಂದ್ ಕುಮಾರ್. ಚಿತ್ರದುರ್ಗ

### ಏಕಲವ್ಯರ ಬಗ್ಗೆ ಏಕಿಲ್ಲ?

ಸರ್ಕಾರ ನೀಡುತ್ತಿರುವ ಬಹುಪಾಲು ಸವಲತ್ತುಗಳ ಮೂಲಕವೇ ಮುಂದುವರಿದ ದಲಿತರ ಬಗ್ಗೆ ಅ. 14ರ ವಿಚಾರ ಲಹರಿಯಲ್ಲಿ ಹೇಳಿರುವ ಶಿಕಾಕು, ಇತರರಂತೆ ತಾವಾಗಿಯೇ ಮೇಲೆ ಬಂದಿರುವವರ ಬಗ್ಗೆಯೂ ಹೇಳಿದ್ದರೆ ನಿಜಕ್ಕೂ ಅರ್ಥಪೂರ್ಣವಾಗುತ್ತಿತ್ತು.

-ಶಂಕರೇಗೌಡ ತುಂಬಕೆರೆ, ಮಂಡ್ಯ

### ನೇಗಿಲಯೋಗಿ ಮನೋಜ್ಞ ಕಥೆ

ಚಂದ್ರಶೇಖರ ಬಾಳೆ ರಚಿಸಿದ 'ನೇಗಿಲ ಯೋಗಿ' ಕಥೆ ಮನೋಜ್ಞ ನಿರೂಪಣೆಯಿಂದ ಸೊಗಸಾಗಿ ಮೂಡಿಬಂದಿದೆ.

-ವಸಂತಾ ಆನಂದ್, ನಾರಸಂದ್ರ

## ಧಾರಾವಾಹಿಗಳಿಂದ 'ಸುಧಾ' ಜನಪ್ರಿಯ

'ಮೈದುಂಬಿದ ಸುಧಾ' (ಅ. 14)ರ ಹೆಚ್.ಎಸ್. ಸೂರ್ಯನಾರಾಯಣ, ಕಡೂರು ಇವರ ಪತ್ರ ಓದಿದೆ. 46 ವರ್ಷಗಳ ಹಿಂದೆ 'ಸುಧಾ' ಪ್ರಾರಂಭವಾದಾಗ, ಅಂದರೆ ಜನವರಿ 1965ರಲ್ಲಿ ಅದರ ಬೆಲೆ 30 ಪೈಸೆ ಇತ್ತು. ಕಾಲಕ್ರಮೇಣ 40ಪೈ, 50ಪೈ, 60ಪೈ, ಹೀಗೆ ಜಾಸ್ತಿ ಯಾಗುತ್ತಾ, ಈಗ ರೂ. 12ಕ್ಕೆ ನಿಂತಿದೆ. 'ಸುಧಾ' ಪತ್ರಿಕೆ ಜನಪ್ರಿಯತೆ ಹೆಚ್ಚಾಗಿದ್ದು ಕಾದಂಬರಿ ಸ್ಪರ್ಧೆ ಏರ್ಪಡಿಸಿದ್ದರಿಂದ. 'ಎಡಕಲ್ಲು ಗುಡ್ಡದ ಮೇಲೆ' ಕಾದಂಬರಿಗೆ ಬಹುಮಾನ ಬಂದು ಧಾರಾವಾಹಿಯಾಗಿ ಪ್ರಕಟಗೊಂಡ ಮೇಲೆ ಜನಪ್ರಿಯತೆ ಮತ್ತಷ್ಟು ಹೆಚ್ಚಿತು. ಅನಂತರ 'ಚಿತ್ರ ಸುಧಾ', 'ಜ್ಞಾನ ಸುಧಾ' ಅಂಕಣಗಳಿಂದಲೂ ಜನಪ್ರಿಯತೆ ಮತ್ತಷ್ಟು ಹೆಚ್ಚಿತು.

-ಗುಬ್ಬಿ ರೇವಣಾರಾಧ್ಯ, ಬೆಂಗಳೂರು

